# ಉದ್ಧರೇದಾತ್ಮನಾತ್ಮಾನಂ

◆ ಆರ್. ಕೆ. ಶ್ರೀಕಂಠಕುಮಾರಸ್ವಾಮಿ

ಭಗವದ್ಗೀತೆಗೆ "ತಾತ್ಪರ್ಯ ಬೋಧಿನೀ" ಎಂಬ ಅದ್ಭುತ ವ್ಯಾಖ್ಯಾನವನ್ನು ಬರೆದಿರುವ ಶ್ರೀವಿದ್ಯಾರಣ್ಯ ಸ್ವಾಮಿಗಳ ಗುರುಗಳಾದ ಶ್ರೀ ಶಂಕರಾನಂದ ಸ್ವಾಮಿಗಳು (ಸುಮಾರು ಕ್ರಿ.ಶ.೧೧೫೦) **ಆತ್ಮೈವ ಹ್ಯಾತ್ಮನೋ ಬಂಧುಃ** ಎಂಬ ವಾಕ್ಯಕ್ಕೆ ವ್ಯಾಖ್ಯೆ ಇವತ್ತಿನ ಕಾಲಕ್ಕೆ ಅತ್ಯಂತ ಪ್ರಸ್ತುತವಾಗಿದೆ. ಅದರ ಒಂದು ಸಂಕ್ಷಿಪ್ತ ನಿರೂಪಣೆಯೇ ಈ ಲೇಖನದ ಉದ್ದೇಶ.

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥

"ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು; ತನ್ನನ್ನು ನಾಶ ಮಾಡಿಕೊಳ್ಳಬಾರದು. ತನಗೆ ತಾನೇ ಬಂಧು. ತನಗೆ ತಾನೇ ಶತ್ರು."

ಇದು ಶ್ರೀಮದ್ಭಗವದ್ಗೀತೆಯ ೬ನೇ ಅಧ್ಯಾಯದ ೫ನೇ ಶ್ಲೋಕ. ಇದರ ತಾತ್ಪರ್ಯವೇನು? ಭಗವದ್ಗೀತೆಯು ಆತ್ಮತತ್ತ್ವವನ್ನು ಉಪದೇಶಿಸಲು ಹೊರಟಿರುವ ಪ್ರಸ್ಥಾನತ್ರಯದ ಒಂದು ಗ್ರಂಥವಾದರೂ, ನಮ್ಮ ಇವತ್ತಿನ ಲೌಕಿಕ ಜೀವನಕ್ಕೂ ಅದರಲ್ಲಿ ಸಮಸ್ಯಾಪರಿಹಾರಕ ವಿಷಯಗಳು ಹೇರಳವಾಗಿವೆ ಎನ್ನುವುದು ಸರ್ವವಿದಿತ.

ಅರ್ಜುನನಿಗೆ ಆತ್ಮವಿಷಯವನ್ನು ಹೇಳಹೊರಟ ಕೃಷ್ಣನು ಸಂನ್ಯಾಸಕ್ಕೂ ಕರ್ಮಯೋಗಕ್ಕೂ ಇರುವ ಸಂಬಂಧವನ್ನು ಸ್ಪಷ್ಟಪಡಿಸುತ್ತಿರುವ ಸಮಯದಲ್ಲಿ ಹೇಳಿದ ಶ್ಲೋಕವಿದು.

ತಾತ್ಪರ್ಯವಿಷ್ಟೆ: ಅರ್ಜುನ! ಈ ಸಂಸಾರಸಮುದ್ರದಿಂದ ಪಾರಾಗಬೇಕೆನ್ನುವವನು ತಾನೇ ಶ್ರಮಪಟ್ಟು ನಿತ್ಯಾನಿತ್ಯ-ವಸ್ತು ವಿವೇಕವನ್ನು ಪಡೆದುಕೊಂಡು ತೀವ್ರ ವೈರಾಗ್ಯವನ್ನು ಅಭ್ಯಸಿಸಿ, ಶಮ ದಮಾದಿಗಳಿಂದ ಅಂತರಂಗ ಶುದ್ಧಿ ಮಾಡಿಕೊಂಡು, ಗುರುಮುಖೇನ ವೇದಾಂತವಾಕ್ಯಶ್ರವಣ ಮಾಡಿ, ಯುಕ್ತಿಗಳಿಂದ ಮನನ ಮಾಡಿ, ಕೊನೆಗೆ ನಿದಿಧ್ಯಾಸನವೆಂಬ ಸಮಾಧಿಸ್ಥಿತಿಯನ್ನು ಪಡೆದು ಆನಂದಿಸಬೇಕು. ಇದನ್ನೇ ಆತ್ಮೋದ್ಧಾರವೆನ್ನುತ್ತಾರೆ. ಈ ಆತ್ಮೋದ್ಧಾರವನ್ನು, ತಾನೇ ಮಾಡಿಕೊಳ್ಳಬಹುದೇ ಹೊರತು ಇನ್ನೊಬ್ಬನು ಇವನಿಗೋಸ್ಕರ ಮಾಡಲು ಸಾಧ್ಯವಿಲ್ಲ. ವಿವೇಕ, ವೈರಾಗ್ಯ, ಶಮ ದಮಾದಿಗಳನ್ನು ಪ್ರತಿಯೊಬ್ಬ ವ್ಯಕ್ತಿಯೂ ಶ್ರಮಪಟ್ಟು ತಾನೇ ಸಂಪಾದಿಸಬೇಕೇ ಹೊರತು ಇನ್ನೊಬ್ಬನು ಸಂಪಾದಿಸಿ ಇವನಿಗೆ ಕೊಡಲು ಸಾಧ್ಯವಿಲ್ಲ. ಅದಕ್ಕೇ **ಉದ್ಧರೇದಾತ್ಮನಾತ್ಮಾನಂ** ಎಂದು ಹೇಳಿದ್ದು. ಹಾಗೆ ಮಾಡದೆ ಹೋದಲ್ಲಿ ತನ್ನನ್ನು ತಾನೇ ನಾಶಮಾಡಿಕೊಂಡಹಾಗಾಗುತ್ತದೆ. ಪರಮಾತ್ಮನು ಕರುಣಿಸಿರುವ ಮನುಷ್ಯತ್ವದ ಗುಣಸಾಮರ್ಥ್ಯಗಳಿಗೆ ಇದೇ ತಾನೆ ಪ್ರಯೋಜನ! ಮಿಕ್ಕ ಇಂದ್ರಿಯ ಸಾಮರ್ಥ್ಯಗಳು ಮೃಗಗಳಿಗೆ ಇದ್ದಂತೆ ನಮಗೂ ಇವೆ. ಮನುಷ್ಯತ್ವದ ಉಪಯೋಗವನ್ನು ಮೇಲೆ ಹೇಳಿದ ರೀತಿಯಲ್ಲಿ ಮಾಡಿಕೊಳ್ಳಲಿಲ್ಲವಾದರೆ ನಾವೂ ಮೃಗಗಳೇ ಆಗುತ್ತೇವೆ. ಅದನ್ನೇ ಆತ್ಮನಾಶ ಎನ್ನುವುದು. ಅಂದರೆ ಮನುಷ್ಯತ್ವವನ್ನೇ ನಾಶಮಾಡಿಕೊಂಡಂತಾಯಿತು.

ಲೋಕದಲ್ಲಿಯೂ ಕೂಡ, ರೋಗದಿಂದ ನರಳುತ್ತಿರುವವನು ವೈದ್ಯನು ಹೇಳಿದ ಔಷಧಗಳನ್ನು ಸರಿಯಾಗಿ ತೆಗೆದುಕೊಂಡು, ಪಥ್ಯ ಪಾನಾದಿಗಳನ್ನು ಸರಿಯಾಗಿ ಮಾಡಿದರೆ ತಾನೆ ರೋಗ ವಾಸಿಯಾಗುವುದು? ಅದು ಯಾರಿಗೆ ರೋಗ ಬಂದಿದೆಯೋ ಅವರೇ ಮಾಡಬೇಕಲ್ಲವೇ? ಇನ್ನೊಬ್ಬರು ಇವರಿಗೋಸ್ಕರ ಔಷಧ ಪಥ್ಯಗಳನ್ನು ಮಾಡಿದರೆ ಇವರಿಗೆ ರೋಗ ವಾಸಿಯಾಗುವುದೆಂತು? ಪಥ್ಯಾದಿಗಳನ್ನು ಸರಿಯಾಗಿ ಮಾಡದೆ, ಔಷಧಗಳನ್ನು ಸರಿಯಾಗಿ ತೆಗೆದುಕೊಳ್ಳದಿದ್ದರೆ, ರೋಗ ಉಲ್ಬಣವಾಗಿ ಶರೀರವನ್ನೇ ತಿಂದುಹಾಕಬಹುದಲ್ಲವೇ? ಹಾಗೆ ವೇದಾಂತದಲ್ಲಿ ಶುದ್ಧ, ಬುದ್ಧ, ಮುಕ್ತ ಸ್ವಭಾವದ ಆತ್ಮನಿಗೆ, ಶರೀರವು ಒಂದು ವ್ಯಾಧಿಯಿದ್ದಂತೆ. ಈ ವ್ಯಾಧಿಗೆ ಅನ್ನವೇ ಔಷಧಿ. ಅದನ್ನು ಸರಿಯಾದ ಪ್ರಮಾಣದಲ್ಲಿ, ಶರೀರಕ್ಕೆ ಬೇಕಾದ ಅಂಶಗಳೊಂದಿಗೆ ಆಹಾರವಾಗಿ ತೆಗೆದುಕೊಂಡರೆ, ಶರೀರವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಅದರ ಸಹಾಯದಿಂದಲೇ, ಆತ್ಮನನ್ನು ಅರಿಯಬಹುದೆನ್ನುವುದೇ ಶ್ಲೋಕದ ಮೊದಲನೆಯ ಪಾದದ ತಾತ್ಪರ್ಯ.

ಲೌಕಿಕದಲ್ಲಿಯೂ ಕೂಡ, ವಿದ್ಯೆಯಲ್ಲಾಗಲಿ, ಉದ್ಯೋಗದಲ್ಲಿಯಾಗಲಿ, ಮುಂದುವರಿದು ಉತ್ತಮನಾಗಬೇಕೆಂದರೆ, ತಾನೆ ಶ್ರಮಪಟ್ಟು ವಿದ್ಯಾಭ್ಯಾಸ ಮಾಡಿ, ಔದ್ಯೋಗಿಕ ತಂತ್ರಗಳನ್ನೆಲ್ಲ ಚೆನ್ನಾಗಿ ತಿಳಿದುಕೊಂಡರೆ ತಾನೆ ಸಾಧ್ಯ! ಪರೀಕ್ಷೆಯಲ್ಲಿ ಮಕ್ಕಳು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗಬೇಕಾದರೆ, ತಂದೆ-ತಾಯಿಗಳು ಶ್ರಮಪಟ್ಟರೆ ಸಾಧ್ಯವಿಲ್ಲ! ಉಪಾಧ್ಯಾಯರು ಶ್ರಮಪಟ್ಟರೆ ಸಾಧ್ಯವಿಲ್ಲ. ವಿದ್ಯಾರ್ಥಿಯೇ ಶ್ರಮಪಡಬೇಕು. ಉದ್ಯೋಗದಲ್ಲಿ ಉನ್ನತಮಟ್ಟಕ್ಕೆ ಹೋಗಬೇಕಾದರೆ ಸ್ವಂತ ಪರಿಶ್ರಮದಿಂದಲೇ ಎನ್ನುವುದು ಸ್ವತಃಸಿದ್ಧ

ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದು ಚೆನ್ನೈ ಐ.ಐ.ಟಿ. ಸಂಸ್ಥೆಯಲ್ಲಿ ಗಣಿತಶಾಸ್ತ್ರದ ಅಧ್ಯಾಪಕರಾಗಿ, ಅನಂತರ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ಕುಲುಮೆ ಮೇಲ್ವಿಚಾರಕರಾಗಿದ್ದ ಲೇಖಕರು ವೇದಾಧ್ಯಯನ ಹಾಗೂ ಅಧ್ಯಾಪನದಲ್ಲಿಯೂ ನಿರತರು. ಮೈಸೂರಿನಲ್ಲಿ ನೆಲೆಸಿರುವ ಇವರು 'ಹೃದಯಸಂಪನ್ನತೆ' ಎಂಬ ಕೃತಿಯನ್ನು ರಚಿಸಿದ್ದಾರೆ.

(ಇತರರ ಪ್ರಭಾವದಿಂದ ಮೇಲಕ್ಕೆ ಬಂದಿರುವವರ ವಿಷಯ ಬೇರೆ). ಇದೇ **ಉದ್ಧರೇದಾತ್ಮನಾತ್ಮಾನಂ**. ಹಾಗೆ ಮಾಡದಿದ್ದರೆ ಆತ್ಮಾವಸಾದನ (ಆತ್ಮನಾಶ) ಮಾಡಿಕೊಂಡಂತೆಯೇ.

ಎರಡನೆಯ ಪಾದದಲ್ಲಿ **ಆತ್ಮೈವ ಹ್ಯಾತ್ಮನೋ ಬಂಧುಃ** ಎಂದಿದೆ. ಅಂದರೆ ತನಗೆ ತಾನೇ ಬಂಧು. ಹಾಗೆಯೇ ತನಗೆ ತಾನೇ ಶತ್ರು. ಅಂದರೆ ಈ ಇಂದ್ರಿಯಸಂಘಾತವಾದ ಶರೀರ ಏನುಂಟೋ (ಅದನ್ನೂ ಆತ್ಮಾ ಎಂಬ ಶಬ್ದದಿಂದ ಕರೆಯಲ್ಪಟ್ಟಿದೆ) ಇದರ ಸಹಾಯದಿಂದ ಹೃದಯಾಂತರಾಳದಲ್ಲಿರುವ ಆತ್ಮನನ್ನು ತಿಳಿದುಕೊಳ್ಳಬೇಕು. ಆಗ ಈ ಆತ್ಮನು (ಇಂದ್ರಿಯ ಸಂಘಾತ ಶರೀರವು) ಆ ಆತ್ಮನಿಗೆ ನಿಜವಾದ ಬಂಧು. ಹಾಗಿಲ್ಲದೆ ಇಂದ್ರಿಯಗಳನ್ನೇ ಸ್ವೇಚ್ಛೆಯಾಗಿ ಬಿಟ್ಟು ಭೋಗಾದಿಗಳಲ್ಲಿಯೇ ಮುಳುಗಿದ್ದರೆ ಆಗ ಅಂಥಾ ಆತ್ಮನು—ಇಲ್ಲಿ ಶರೀರವೆಂಬ ಅರ್ಥದಲ್ಲಿ, ಒಳಗಡೆ ಇರುವ ಆ ಶುದ್ಧಾತ್ಮನಿಗೆ ಶತ್ರು. ಇದನ್ನೇ ನೊಬೆಲ್ ಪಾರಿತೋಷಕ ವಿಜೇತನಾದ ಷ್ರಾಡಿಂಜರ್ (Shrodinger) ಎಂಬ ಭೌತವಿಜ್ಞಾನಿಯು "You are the conquerer and you are the conquered; you are the statue and you are the chisel" (ನೀನೇ ವಿಜೇತ, ನೀನೇ ಜಯಿಸಲ್ಪಟ್ಟವನು; ನೀನೇ ಶಿಲ್ಪಿ, ನೀನೇ ವಿಗ್ರಹ) ಎಂದು ಹೇಳಿದ. ತೈತ್ತಿರೀಯ ಆರಣ್ಯಕದ ಮೂರನೇ ಪ್ರಶ್ನೆಯ ಕೊನೆಯಲ್ಲಿ ಪ್ರಾಣವಾಯುವಿನ ವಿಷಯವನ್ನು ಹೇಳುತ್ತಾ ಇದನ್ನು ಹೇಳಲಾಗಿದೆ: **ಯದಾಭಾರಂ ತಂದ್ರಯತೇ ನಿಭರ್ತುಮ್। ನಿಧಾಯ ಭಾರಂ ಪುನರಸ್ತಮೇತಿ ॥ ...ಯಸ್ತದ್ವೇದ ಯತ ಆಬಭೂವ । ಸಂಧಾಂ ಚ ಯಾಗ್ಂ ಸಂದಧೇ ಬ್ರಹ್ಮಣೈಷಃ । ರಮತೇ ತಸ್ಮಿನ್ನುತ ಜೀರ್ಣೇ ಶಯಾನೇ"** (ಯಾವಾಗ ಆ ಪ್ರಾಣದೇವರಿಗೆ ಈ ಶರೀರವು ಭಾರವೆನಿಸುತ್ತದೆಯೋ ಆಗ ಅದನ್ನು ಅಲ್ಲೇ ಬಿಟ್ಟು ಹೊರಟುಹೋಗುತ್ತಾನಂತೆ. ..ಯಾರು ತನ್ನ ಜನನಕ್ಕೆ, ಇರುವಿಕೆಗೆ ಕಾರಣಗಳನ್ನು ಕಂಡುಹಿಡಿಯಲು ಪ್ರಯತ್ನಪಟ್ಟು, ಆ ಪರಮಾತ್ಮನಿಗೂ ತನಗೂ ಇರುವ ಸಂಬಂಧದ ಬಗ್ಗೆ ತಿಳಿಯಲು ಪ್ರಯತ್ನಿಸುತ್ತಾನೋ, ಅವನ ಶರೀರ ಜೀರ್ಣವಾಗಿದ್ದರೂ ಸಂತೋಷದಿಂದ ಇರುತ್ತಾನಂತೆ!) ಅಂದರೆ ಪ್ರತಿಯೊಬ್ಬನೂ ತನ್ನನ್ನು ತಾನೇ ತಿದ್ದಿಕೊಳ್ಳುತ್ತಾ, ಪ್ರಾಪಂಚಿಕ ಉಪಭೋಗಗಳ ವಿಷಯದಲ್ಲಿ ವೈರಾಗ್ಯ ಪಡೆದು, ಪರಮಾತ್ಮನ ಕಡೆಗೆ ಮನಸ್ಸನ್ನು ತಿರುಗಿಸಬೇಕು ಎಂಬುದು ತಾತ್ಪರ್ಯ.

ಸಾಮಾನ್ಯವಾಗಿ ಲೋಕದಲ್ಲಿ ಕಷ್ಟಕ್ಕೆ ಸಿಲುಕಿರುವವನನ್ನು ನೋಡಿ, ಅವನ ಬಂಧುಗಳು ಅವನ ಸಹಾಯಕ್ಕೆ ಬಂದು ಉದ್ಧಾರ ಮಾಡಿರುವುದನ್ನೋ ಮಾಡುತ್ತಿರುವುದನ್ನೋ ಕೇಳಿದ್ದೇವೆ, ನೋಡಿದ್ದೇವೆ. 'ಬಂಧು' ಶಬ್ದ ಸಾರ್ಥಕವಾಗಬೇಕಾದರೆ ಈ ರೀತಿಯ ಸಹಾಯದಿಂದ ತಾನೆ! ಹಾಗೆ ಇಲ್ಲಿ ನಮ್ಮ ಬಂಧುಗಳು ನಮ್ಮ ಆತ್ಮೋದ್ಧಾರ ಮಾಡಬಹುದಲ್ಲಾ ಎಂಬ ಪ್ರಶ್ನೆ ಬರಬಹುದು. "ತನಗೆ ತಾನೇ ಬಂಧು" ಎಂದರೆ ಹೇಗೆ ಸರಿಹೊಂದುತ್ತದೆ? ಶ್ರಾದ್ಧಾದಿಗಳನ್ನು ಮಾಡಿ, ಔರ್ಧ್ವದೈಹಿಕ ಕ್ರಿಯೆಗಳನ್ನು ಮಾಡಿ, ಪಿತೃಗಳನ್ನು ಉದ್ಧರಿಸುತ್ತಿದ್ದೇವೆ, ಅವರಿಗೆ ಸದ್ಗತಿಯನ್ನು ಕೊಡುತ್ತಿದ್ದೇವೆ ಎಂದು ತಾನೆ ಲೋಕದಲ್ಲಿ ಹೇಳುತ್ತಾರೆ. ಸಂಕಲ್ಪಗಳೂ ಹಾಗೆಯೇ ಇವೆ. ಪುತ್ರ (ಮಗ) ಶಬ್ದಕ್ಕೆ ನಿರ್ವಚನ ಹೇಳುವಾಗಲೂ **ಪುನ್ನಾಮ ನರಕಾತ್ ತ್ರಾಯತೇ ಇತಿ ಪುತ್ರಃ** (ಪುತ್ ಎಂಬ ನರಕದಿಂದ ಪಾರು ಮಾಡುವವನೇ ಮಗ) ಎಂದು ಹೇಳುತ್ತಾರೆ. ಆದ್ದರಿಂದ ಆತ್ಮನಿಗೆ ಆತ್ಮನೇ ಬಂಧು ಎಂದು ಹೇಳುವುದು ಉಚಿತವಲ್ಲ ಎಂಬ ಪಕ್ಷ ಇಟ್ಟುಕೊಂಡು ಶ್ರೀಶಂಕರಾನಂದರು ಹೇಳುತ್ತಿದ್ದಾರೆ: **ಸ್ವಾವಿದ್ಯಯಾ ಜನನ ಮರಣದುಃಖಾದಿ ಪ್ರವಾಹೇ ಪತಿತ್ವಾ ಆಧ್ಯಾತ್ಮಿಕಾದಿ ತಾಪತ್ರಯಾಗ್ನಿನಾ ಸಂತಪ್ಯಮಾನಸ್ಯ ಆತ್ಮನಃ ಸ್ವಸ್ಯ ಆತ್ಮಾ ಸ್ವಯಮೇವ ಬಂಧುಃ, ಸಂಸಾರ ದುಃಖಾತ್ ಮೋಚಯಿತ್ವಾ ನಿರತಿಶಯ ಮೋಕ್ಷಸುಖೇನ ಬಧ್ನಾತೀತಿ ಬಂಧುಃ...** (ತನ್ನ ಅಜ್ಞಾನದಿಂದ ಜನನಮರಣಗಳೆಂಬ ದುಃಖಪ್ರವಾಹದಲ್ಲಿ ಬಿದ್ದು, ಆಧ್ಯಾತ್ಮಿಕಾದಿ ತಾಪತ್ರಯಾಗ್ನಿಗಳಿಂದ ಬೆಂದು ಹೋಗುತ್ತಿರುವ ತನಗೆ ತಾನೇ ಬಂಧು. ಸಂಸಾರದುಃಖದಿಂದ ಮುಕ್ತಗೊಳಿಸಿ ನಿರತಿಶಯವಾದ ಮೋಕ್ಷ ಸುಖದಿಂದ ನಮ್ಮನ್ನು ಬಂಧಿಸುತ್ತಾನೆ ಎಂಬುದಕ್ಕೆ ಬಂಧು ಎನ್ನುತ್ತಾರೆ. ಸಂಸಾರ-ದುಃಖ-ಸಮುದ್ರದಿಂದ ಪಾರು ಮಾಡುವವನು ತನಗೆ ತಾನೇ ಹೊರತು ಪುತ್ರ ಭ್ರಾತ್ರಾದಿಗಳಲ್ಲ. ಏಕೆಂದರೆ ಅವರುಗಳು ಮಾಡುವ ಶ್ರಾದ್ಧಾದಿ ಕ್ರಿಯೆಗಳಿಗೆ ಆತ್ಮನು ವಿಷಯನಾಗುವುದಿಲ್ಲವಾದ್ದರಿಂದ, ಅವರಿಂದ ಇವನು ಉದ್ಧಾರವಾಗುವುದು ಸಾಧ್ಯವಿಲ್ಲ. ಯಾವ ರೀತಿ ರೋಗಿಯು ತಾನು ಮಾಡದೆ, ಇನ್ನೊಬ್ಬನು ಮಾಡುವ ಔಷಧ ಪಥ್ಯಗಳಿಂದ ರೋಗವಿಮುಕ್ತನಾಗುವುದಿಲ್ಲವೋ, ಹಾಗೆಯೇ ಇಲ್ಲಿಯೂ ತಾನೇ ಮಾಡಿದ ಶ್ರವಣ, ಮನನ, ನಿದಿಧ್ಯಾಸನಗಳಿಂದ ಮುಕ್ತನಾಗಬೇಕೇ ಹೊರತು, ಪುತ್ರಾದಿಗಳ ನೆರವಿನಿಂದ ಮುಕ್ತರಾಗಲು ಸಾಧ್ಯವಿಲ್ಲ) ಈ ವ್ಯಾಖ್ಯಾನದಿಂದ ತಿಳಿದುಬರುವ ವಿಚಾರ ಇದು –ನಾವು ಸ್ವತಃ ಪ್ರಯತ್ನ ಮಾಡದಿದ್ದರೆ ಯಾರೂ ನಮ್ಮನ್ನು ಉದ್ಧಾರ ಮಾಡಲಾಗುವುದಿಲ್ಲ. ಉಡುಗೊರೆಯಾಗಿ ಕೊಡುವಂತಹ ವಸ್ತುವಲ್ಲ ಇದು. ಹಾಗೆ ಒಂದು ವೇಳೆ ದೊರೆತರೂ ಅದಕ್ಕೆ ಮೌಲ್ಯ ಬರುವುದು ನಾವು ಅದನ್ನು ಸಾಧಿಸಿ ಪಡೆದುಕೊಂಡಾಗಲೇ. ಸಾಧನೆಯಿಲ್ಲದೆ ಫಲವಿಲ್ಲ ಎಂಬುದು ಸ್ಪಷ್ಟ. ಮಾನವ ನಿರಂತರವಾಗಿ ಈ ಸಾಧನೆಯಲ್ಲಿ ತೊಡಗಿದಾಗ ದೇಹ, ಇಂದ್ರಿಯಗಳ ವಶದಿಂದ ಬಿಡುಗಡೆಯನ್ನು ಹೊಂದಿ ಆತ್ಮನಲ್ಲಿ ನೆಲೆನಿಲ್ಲುತ್ತಾನೆ. ಆಧ್ಯಾತ್ಮಿಕ ಮೂಲದಿಂದ ಮಾತ್ರ ಮಾನವನ ಪೂರ್ಣ ಉದ್ಧಾರ ಸಾಧ್ಯವೆಂಬುದು ಈ ಶ್ಲೋಕದ ತಾತ್ಪರ್ಯ.

*